## 1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಬೆಳಗಾವಿ ಇವರ ನ್ಯಾಯಾಲಯದಲ್ಲಿ ಬೆಳಗಾವಿ

## SC. No: 162/2025

CW. No: 13
**PW. No: 13**

ಸಾಕ್ಷಿದಾರರ ಹೆಸರು : ಸೈಫ ದೊಡವಾಡ

ತಂದೆಯ ಹೆಸರು : ರಸೂಲಸಾಬ ದೊಡವಾಡ

ವಯಸ್ಸು : 25 ವರ್ಷ

ಉದ್ಯೋಗ : ಬಟ್ಟೆ ಅಂಗಡಿಯಲ್ಲಿ ಕೆಲಸ

ವಾಸ್ತವ್ಯ : ಸವದತ್ತಿ

ಇಂದು ದಿನಾಂಕಃ 01.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ -**

ನಾನು ಕಳೆದ 7 ವರ್ಷಗಳಿಂದ ಸವದತ್ತಿಯ ಮಾರುಕಟ್ಟೆಯಲ್ಲಿರುವ ಸುಲಾಕೆ ಗಾರ್ಮೆಂಟ್ಸ್ ನಲ್ಲಿ ಸೇಲ್ಸಮನ್ ಎಂದು ಕೆಲಸ ಮಾಡುತ್ತಿದ್ದೇನೆ. ಸದರಿ ಗಾರ್ಮೆಂಟ್ಸನಲ್ಲಿ ಸಿಸಿ ಕ್ಯಾಮರಾ ಅಳವಡಿಸಿರುತ್ತಾರೆ. ಈಗ್ಗೆ ಒಂದು ವರ್ಷದ ಹಿಂದೆ ಸವದತ್ತಿ ಪೋಲಿಸರು ನಮ್ಮ ಗಾರ್ಮೆಂಟ್ಸನಲ್ಲಿ ಅಳವಡಿಸಿದ ಸಿಸಿಟಿವಿಯಿಂದ ಫೂಟೇಜನ್ನು pendriveನಲ್ಲಿ ಪಡೆದುಕೊಂಡು ಹೋಗಿರುತ್ತಾರೆ. ನಾನು ಸ್ವತಃ ಪೋಲಿಸರಿಗೆ ಸಿಸಿಟಿವಿ ಫೂಟೇಜನ್ನು pendriveಗೆ ಸಂಗ್ರಹಿಸಿ ಕೊಟ್ಟಿರುವುದಿಲ್ಲ. ಗಾರ್ಮೆಂಟ್ಸನಲ್ಲಿ ಪೋಲಿಸರು ನಾನು ಈಗ ನೋಡುತ್ತಿರುವ ಪ್ರಮಾಣಪತ್ರಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ಪ್ರಮಾಣಪತ್ರವು ಬಿಎಸ್‌ಎ ಕಲಂ 63(4)(ಸಿ)ರಡಿಯಲ್ಲಿ ಸಲ್ಲಿಸಿದ ಪ್ರಮಾಣಪತ್ರ ಇದ್ದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಪ್ರಮಾಣಪತ್ರವನ್ನು ನಿಪಿ-47 ಎಂದು, ಸಾಕ್ಷಿಯ ಸಹಿಯನ್ನು ನಿಪಿ-47(ಎ) ಎಂದು ಗುರುತಿಸಲಾಯಿತು. ನಿಪಿ-47 ಪ್ರಮಾಣಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ, ಯಾವ ಕಾರಣಕ್ಕೆ ಪೋಲಿಸರು ನಿಪಿ-47ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ನನಗೆ ಬೇರೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಫೂಟೇಜ ನೋಡಿರುವುದಿಲ್ಲ. ನನ್ನನ್ನು ಪೋಲಿಸರು ವಿಚಾರಣೆ ಮಾಡಿ ಹೇಳಿಕೆ ಪಡೆದಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿದ ಮೇರೆಗೆ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2. ದಿನಾಂಕ 09.06.2025ರಂದು ಸವದತ್ತಿ ಪೋಲಿಸರು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನಮ್ಮ ಗಾರ್ಮೆಂಟ್ಸಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೋಲಿಸರು ನನ್ನನ್ನು ಆರೋಪಿ , ಚಾಸಾ.6 ಹಾಗೂ ಮೃತ ಮಕ್ತುಮಸಾಬ ನಮ್ಮ ಅಂಗಡಿಗೆ ಬಂದಿರುವ ಬಗ್ಗೆ ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 04.06.2025ರ ರಾತ್ರಿ 09.00 ಗಂಟೆ ಸಮಯದ ಸಿಸಿಟಿವಿ ಫೂಟೇಜನ್ನು ನಾನು ನೋಡಿ ಆರೋಪಿಯನ್ನು ತೋರಿಸಿ ಅವರು ಪುನಃ ಒಬ್ಬರಿಗೊಬ್ಬರು ಜಗಳ ಮಾಡುತ್ತಾ ಹೊರಗೆ ಹೋಗಿರುವುದು ಕಂಡುಬಂದಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಂತರ ಆರೋಪಿಯು ರೂ.2,000/- ಹಣದ ವ್ಯವಹಾರಕ್ಕೆ ಮೃತನನ್ನು ಕೊಲೆ ಮಾಡಿದ ಬಗ್ಗೆ ನನಗೆ ಕೇಳಿ ಗೊತ್ತಾಗಿ ನಮ್ಮ ಅಂಗಡಿಯಲ್ಲಿರುವ ಸಿಸಿಟಿವಿ ಫೂಟೇಜನ್ನು ಡೌನಲೋಡ ಮಾಡಿ pendriveಗೆ ಅಳವಡಿಸಿ ಪೋಲಿಸರಿಗೆ ನಾನೇ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ನಿಪಿ-47 ಪ್ರಮಾಣಪತ್ರವನ್ನು ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲಿಸರ ಸಮಕ್ಷಮ ನೀವು ಈಗ ಓದಿ ಹೇಳಿದಂತೆ, 'ನಿನ್ನೆ ದಿವಸ ದಿನಾಂಕ 09.06.2025ರಂದು ಮಧ್ಯಾಹ್ನ ನಾನು ಸುಲಾಖೆ ಗಾರ್ಮೆಂಟ್ಸ ಅಂಗಡಿಯಲ್ಲಿ ಇದ್ದಾಗ ತಾವು ಪಂಚರೊಂದಿಗೆ ತಮ್ಮ ಸಂಗಡ ಒಬ್ಬನಿಗೆ ಕರೆದುಕೊಂಡು ನಮ್ಮ ಅಂಗಡಿಗೆ ಬಂದು ನಮ್ಮ ಮುಂದೆ .................................................................................................... ನಾನು ಈ ಬಗ್ಗೆ ನಮ್ಮ ಅಂಗಡಿಯಲ್ಲಿ ರಿಕಾರ್ಡ ಆಗಿದ್ದ ಸಿಸಿಟಿವಿ ಫೂಟೇಜನ್ನು ಸಿಡಿಯಲ್ಲಿ ಡೌನಲೋಡ ಮಾಡಿ ಕೊಟ್ಟಿರುತ್ತೇನೆ.' ಎಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-48 ಎಂದು ಗುರುತಿಸಲಾಯಿತು.

4. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ, ಆರೋಪಿಯೇ ಮೃತನ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿರುತ್ತಾನೆ ಎಂಬ ವಿಷಯ ತಿಳಿದಿದ್ದರೂ, ನಿಪಿ-48ರಂತೆ ಪೋಲಿಸರ ಮುಂದೆ ಹೇಳಿಕೆ ಮತ್ತು ಮರುಹೇಳಿಕೆಯನ್ನು ನೀಡಿದ್ದರೂ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ **ಸವಾಲುಃ**</u> **ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

<u>**ಮರುವಿಚಾರಣೆಃ ಇಲ್ಲ**</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)

1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.